ಯಾವುದೇ ಕಾರಣಕ್ಕೂ ಇದರಲ್ಲಿ ಕಲಬೆರಕೆಯಾಗಲೀ ಸಂಪ್ರದಾಯವಾಗಲೀ ಮುರಿದಿಲ್ಲ. ಹೀಗಾಗಿ ಇಡೀ ಕುಟುಂಬ ದುಡಿದರೂ ವರ್ಷಕ್ಕೆ ಆಗುವ ತೊಟ್ಟಿಲು ಕೇವಲ 25ರಿಂದ 30 ಮಾತ್ರ' ಎಂದೆನ್ನುತ್ತಾರೆ.

'ದಾಂಡೇಲಿ ಅರಣ್ಯದಲ್ಲಿ ಬೆಳೆವ ಸಾಗುವಾನಿ ಮರಗಳನ್ನು ತೊಟ್ಟಿಲುಗಳ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುತ್ತದೆ. ಇವುಗಳ ಮೇಲೆ ಬಿಡಿಸುವ ಚಿತ್ತಾರಗಳಿಗೆ ನೈಸರ್ಗಿಕ ಗಿಡಮೂಲಿಕೆಗಳಿಂದ ಸಿದ್ಧಗೊಳ್ಳುವ ಬಣ್ಣಗಳನ್ನು ಬಳಸಲಾಗುತ್ತದೆ. ನೂರು ವರ್ಷ ಕಳೆದರೂ ಈ ಬಣ್ಣ ಮಾಸದಿರುವುದೇ ಈ ತೊಟ್ಟಿಲ ಹಿರಿಮೆ. ನಮ್ಮ ಉದ್ದೇಶ ಒಂದೇ, ನಾವು ಸಿದ್ಧಪಡಿಸುವ ಈ ತೊಟ್ಟಿಲಲ್ಲಿ ಮಲಗುವ ಕಂದ ಗಾಬರಿಗೊಳ್ಳಬಾರದು. ತೊಟ್ಟಿಲ ಯಾವುದಾದರೂ ಭಾಗಕ್ಕೆ ಮಗು ಬಾಯಿ ಹಾಕಿದರೆ, ಬಳಸಿದ ಬಣ್ಣ ಆ ಕೂಸಿನ ಆರೋಗ್ಯದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರಬಾರದು' ಎಂದೆನ್ನುತ್ತಾರೆ ಲಕ್ಷ್ಮಣ ಸಾವುಕಾರ.

### ಬೆಲೆ ಕಟ್ಟಲಾಗದ ಕಲೆ!

ಕಲಘಟಗಿ ತೊಟ್ಟಿಲಿನ ಆರಂಭಿಕ ಬೆಲೆಯೇ ₹20 ಸಾವಿರ. ಸ್ಟ್ಯಾಂಡ್ ಸಮೇತ ಬೇಕು ಎಂದರೆ ₹75 ಸಾವಿರದಿಂದ ₹1ಲಕ್ಷದವರೆಗೂ ಇರುತ್ತದೆ. ಇದು ಕೇವಲ ತೊಟ್ಟಿಲು ಮಾತ್ರವಲ್ಲ, ಮನೆಯಲ್ಲಿಟ್ಟರೆ ಮನೆಯ ಅಂದ ಹೆಚ್ಚಿಸುವ ದೊಡ್ಡ ಕಲಾಕೃತಿಯೂ ಹೌದು. ಈಗ ಆಧುನಿಕತೆಗೆ ಹೊರಳುತ್ತಿರುವ ತೊಟ್ಟಿಲುಗಳಲ್ಲಿ ಬೇರಿಂಗ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಒಂದು ಬಾರಿ ತೂಗಿಬಿಟ್ಟರೆ ಕನಿಷ್ಠ ಅರ್ಧ ಗಂಟೆ ಹಗುರವಾಗಿ ತೂಗುವಂತಹ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

ಸಾವುಕಾರ ಅವರಿಂದ ತೊಟ್ಟಿಲು ಖರೀದಿಸಿರುವ ಜಪಾನ್‌ನ ಟೊರೆಂಟೊದಲ್ಲಿರುವ ಗ್ರಾಹಕರೊಬ್ಬರು, ತಾವು ಅದನ್ನು ಮನೆಯಲ್ಲಿ ಬಳಸಿರುವ ರೀತಿ ಕುರಿತಂತೆ ನಾಲ್ಕೈದು ಚಿತ್ರಗಳುಳ್ಳ ಕ್ಯಾಟಲಾಗ್ ಮಾಡಿ, ಅದನ್ನು ಪ್ರಶಂಸಾ ಪತ್ರದೊಂದಿಗೆ ಇವರಿಗೆ ಕಳುಹಿಸಿದ್ದಾರೆ. ಇಷ್ಟುಮಾತ್ರವಲ್ಲ,



### ಕಲಘಟಗಿ ರಸಬಳ್ಳಿ

ಯಶ್–ರಾಧಿಕಾ ದಂಪತಿಗೆ ಮತ್ತು ನಲ್ಲೂರಿನ ಅರಮನೆಗೆ ತೊಟ್ಟಿಲು ನೀಡಿರುವ ಇಲ್ಲಿನ ಈ ಎರಡು ಕಲಾ ಕುಟುಂಬಗಳು ತಮ್ಮ ಊರಿನ ಹೆಸರು ಜನಪ್ರಿಯವಾಗಿರುವ ಕುರಿತು ಹರ್ಷ ವ್ಯಕ್ತಪಡಿಸುತ್ತಾರೆ. ತಾತ, ಮುತ್ತಾತರ ಕಾಲದಿಂದಲೂ ಬಳುವಳಿಯಾಗಿ ಬಂದಿರುವ ಈ ಕಲೆ ಇಂದಿಗೂ ಜೀವಂತವಾಗಿದೆ. ಹೆಚ್ಚು ಲಾಭ ಸಿಗದಿದ್ದರೂ ಜನಪ್ರಿಯತೆ ಸಿಗುತ್ತಿರುವುದು ಸಂತಸದ ಸಂಗತಿ ಎಂದು ಕಲಾವಿದರು ಹೇಳುತ್ತಾರೆ.